ಕನ್ನಡ

# ಸುಗಮಭಾರತಿ

ಐದನೆಯ ಇಯತ್ತೆ





ಪ್ರಾಥಮಿಕ ಶಾಲೆ
ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ

ಸರಕಾರದ ಅನುಮತಿ ಕ್ರಮಾಂಕ: ಪ್ರಾಶಿಸಂ/೨೦೧೪-೧೫/೨೪೩/ಮಂಜೂರಿ/ಡ-೫೦೫/೯೬೫ ದಿನಾಂಕ:- ೨೦/೦೧/೨೦೧೫

# ಕನ್ನಡ

# ಸುಗಮಭಾರತಿ

## ಐದನೆಯ ಇಯತ್ತೆ



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಹಾಗೂ ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

**ಪ್ರಥಮಾವೃತ್ತಿ : ೨೦೧೫**
**ಪುನರ್ಮುದ್ರಣ : ೨೦೧೭**

**© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-೪**

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

**ಕನ್ನಡ ಭಾಷಾ ಸಮಿತಿ :**
ಶ್ರೀ. ಶಿವಬಾಳ ಕೆ. ಗೋಲಿ, ಅಧ್ಯಕ್ಷ
ಶ್ರೀ. ರಾಜೇಂದ್ರ ಡಿ. ಪವಾರ, ಸದಸ್ಯ
ಶ್ರೀ. ಸಂಗೊಂಡಾ ಸಿ. ಮಾಳಿ, ಸದಸ್ಯ
ಶ್ರೀ. ಹಣಮಂತ ಎಮ್. ಕುಂಭಾರ, ಸದಸ್ಯ
ಶ್ರೀಮತಿ. ಜಯದೇವಿ ಆಯ್. ಉಕ್ಕಲಿ, ಸದಸ್ಯೆ
ಡಾ. ಸದಾನಂದ ಎಂ. ಬಿಳ್ಳೂರ, ಸದಸ್ಯ-ಸಚಿವರು

**ಕನ್ನಡ ಕಾರ್ಯಗಟ ಸದಸ್ಯರು:**
ಶ್ರೀ. ಜಿ. ಡಿ. ಮೋರೆ
ಶ್ರೀ. ಬಿ. ಎಸ್. ಕಾಪಸೆ
ಶ್ರೀ. ಟಿ. ವ್ಹಿ. ಸದಾನಂದ
ಶ್ರೀಮತಿ. ಶರ್ಮಿಳಾ ಎಸ್. ಶೆಟ್ಟಿ
ಶ್ರೀಮತಿ. ಜಯಶ್ರೀ ಎಸ್. ಸ್ವಾಮಿ
ಶ್ರೀ. ಶ್ರೀಶೈಲ ಜಿ. ಅವಟಿ

**ಸಂಯೋಜನ ಪ್ರಮುಖ :**
ಡಾ. ಸದಾನಂದ ಎಂ. ಬಿಳ್ಳೂರ,
ವಿಶೇಷಾಧಿಕಾರಿಗಳು ಕನ್ನಡ, ಪಾಠ್ಯಪುಸ್ತಕ ಮಂಡಳ,
‘ಬಾಲಭಾರತಿ’, ಪುಣೆ – ೪
ಶ್ರೀ. ಆರ್. ಎಮ್ ಗಣಾಚಾರಿ,
ವಿಷಯ ಸಹಾಯಕ ಕನ್ನಡ

**ಚಿತ್ರಕಾರ :**
ಶ್ರೀ. ಕಿಶೋರ ಗಿರಧಾರಿ

**ಮುಖಪುಟ :**
ಶ್ರೀ. ಕಿಶೋರ ಗಿರಧಾರಿ

**ಅಕ್ಷರ ಜೋಡಣೆ :**
ಕ್ವಿಂಟೆಕ್ಸ್, ಫೋರ್ಟ್, ಮುಂಬಯಿ

**ನಿರ್ಮಿತಿ :**
ಶ್ರೀ. ಸಚ್ಚಿತಾನಂದ ಆಫಳೆ,
ಮುಖ್ಯ ನಿರ್ಮಿತಿ ಅಧಿಕಾರಿ
ಶ್ರೀ. ಸಂದೀಪ ಆಜಗಾಂವಕರ, ನಿರ್ಮಿತಿ ಅಧಿಕಾರಿ

**ಕಾಗದ :**
೭೦ ಜಿ. ಎಸ್. ಎಮ್, ಕ್ರಿಮವೋವ್ಹ್

**ಮುದ್ರಣಾದೇಶ :**

**ಮುದ್ರಕ :**

**ಪ್ರಕಾಶಕ :**
ಶ್ರೀ. ವಿವೇಕ ಗೋಸಾವಿ,
ನಿಯಂತ್ರಕ, ಪಾಠ್ಯಪುಸ್ತಕ ನಿರ್ಮಿತಿ ಮಂಡಳ,
ಪ್ರಭಾದೇವಿ, ಮುಂಬಯಿ – ೨೫.

## ಪ್ರಸ್ತಾವನೆ

‘ಬಾಲಕರ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಅಧಿಕಾರ ಅಧಿನಿಯಮ-೨೦೦೯’ ಮತ್ತು ‘ರಾಷ್ಟ್ರೀಯ ಶೈಕ್ಷಣಿಕ ರೂಪರೇಷೆ-೨೦೦೫’ ಇವುಗಳನ್ನು ಮುಂದಿಟ್ಟುಕೊಂಡು ರಾಜ್ಯದಲ್ಲಿ ‘ಪ್ರಾಥಮಿಕ ಶಿಕ್ಷಣ ಅಭ್ಯಾಸಕ್ರಮ – ೨೦೧೨’ನ್ನು ಸಿದ್ಧಪಡಿಸಲಾಯಿತು. ಈ ಸರಕಾರಮಾನ್ಯ ಅಭ್ಯಾಸಕ್ರಮದ ಮೇಲೆ ಆಧಾರಿತವಾದ ಐದನೆಯ ಇಯತ್ತೆಯ ಕನ್ನಡ ಸುಗಮಭಾರತಿ ಪುಸ್ತಕವನ್ನು ಪಾಠ್ಯಪುಸ್ತಕ ಮಂಡಳವು ಸಿದ್ಧಪಡಿಸಿದೆ. ಈ ಪತ್ಯಪುಸ್ತಕವನ್ನು ತಮ್ಮ ಕೈಯಲ್ಲಿಡಲು ನಮಗೆ ಆನಂದವೆನಿಸುತ್ತದೆ.

ಇಂಗ್ಲಿಷ ಮಾಧ್ಯಮದ ಶಾಲೆಗಳಲ್ಲಿ ಕನ್ನಡ ಮಾತೃಭಾಷೆ ಇರುವ ವಿದ್ಯಾರ್ಥಿಗಳಿಗೆ ಅವರ ಮಾತೃಭಾಷೆಯ ಅರಿವು ಆಗಬೇಕು, ಮಾತೃಭಾಷೆಯಲ್ಲಿ ಸರಿಯಾಗಿ ಮಾತನಾಡಲು ಮತ್ತು ಬರೆಯಲು ಬರಬೇಕೆಂಬ ಸೀಮಿತ ಅಪೇಕ್ಷೆಯನ್ನು ಈ ಪುಸ್ತಕವನ್ನು ಸಿದ್ಧಗೊಳಿಸುವಾಗ ಇಟ್ಟುಕೊಳ್ಳಲಾಗಿದೆ.

ಇಂಗ್ಲಿಷ ಮಾಧ್ಯಮದ ಶಾಲೆಗಳಲ್ಲಿ ಕನ್ನಡ ಕಲಿಸುವ ಎಲ್ಲ ಹಂತದ ಶಿಕ್ಷಕರು, ಶಿಕ್ಷಣ ತಜ್ಞರು ಈ ಪುಸ್ತಕದ ಪತ್ಯಕಮ್ಮಟದಲ್ಲಿ ನೀಡಿದ ಸೂಚನೆಗಳನ್ನು ಕನ್ನಡ ಭಾಷಾ ಸಮಿತಿಯು ಲಕ್ಷ್ಯದಲ್ಲಿಟ್ಟುಕೊಂಡು ಇದಕ್ಕೆ ಅಂತಿಮ ಸ್ವರೂಪ ನೀಡಿದೆ.

ಕನ್ನಡ ಭಾಷಾ ಸಮಿತಿ ಹಾಗೂ ಕಾರ್ಯಗಟ ಸದಸ್ಯರು, ಸಮೀಕ್ಷಕರು, ತಜ್ಞರು, ಚಿತ್ರಕಾರ ಇವರೆಲ್ಲರಿಗೆ ಮಂಡಳವು ಮನಃಪೂರ್ವಕವಾಗಿ ಆಭಾರಿಯಾಗಿದೆ. ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪಾಲಕರು ಈ ಪುಸ್ತಕವನ್ನು ಸ್ವಾಗತಿಸುವರೆಂದು ಆಶಿಸಿದ್ದೇವೆ.

(ಚಂ. ರಾ. ಬೋರಕರ)
**ಸಂಚಾಲಕ**
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ
ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

**ಪುಣೆ**
**ದಿನಾಂಕ :** ೧೭ ಡಿಸೆಂಬರ ೨೦೧೪

# ಭಾರತದ ಸಂವಿಧಾನ

### ಪೀಠಿಕೆ

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ॥

# ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪರಿವಿಡಿ


| ಪಾಠಗಳು | ಕವಿ/ಲೇಖಕರು | ಪುಟ |
|---|---|---|
| ೧. ಶಿಶುಗೀತೆ | ....... | ೧ |
| ೨. ಶ್ರವಣಗೀತೆ | ... | ೨ |
| ೩. ಚಿತ್ರಕಥೆ | ... | ೩ |
| ೪. ಸಂಭಾಷಣೆ | ... | ೪ |
| ೫. ಅಕ್ಷರಗಳ ಅವಯವಗಳು | ... | ೫ |
| ೬. ಕನ್ನಡ ವರ್ಣಮಾಲೆ | .. | ೬ |
| ೭. ಅಜಯ | ... | ೭ |
| ೮. ಈಶ | .. | ೮ |
| ೯. ದಳ | .. | ೯ |
| ೧೦. ಔಷಧ | .. | ೧೦ |
| ೧೧. ಊಟ | .. | ೧೧ |
| ೧೨. ಓದಿರಿ, ಬರೆಯಿರಿ | .. | ೧೨ |
| ೧೩. ಓದಿರಿ, ಬರೆಯಿರಿ | .. | ೧೩ |
| ೧೪. ಓದಿರಿ, ಬರೆಯಿರಿ | .. | ೧೪ |
| ೧೫. ಗುಣಿತಾಕ್ಷರಗಳ ಪರಿಚಯ | .. | ೧೫ |
| ೧೬. ಮನೆ | – ಶಿವಶಂಕರ ಹೊನ್ನುಂಗರ | ೧೭ |
| ೧೭. ಕಸಬುಗಾರರು | .. | ೨೦ |
| ೧೮. ನಮ್ಮ ಶಾಲೆ (ಕವಿತೆ) | – ಗೀತಾ ಬರ್ಲ | ೨೩ |
| ೧೯. ಓದಿರಿ, ಬರೆಯಿರಿ | .. | ೨೬ |
| ೨೦. ಓದಿರಿ, ಬರೆಯಿರಿ | .. | ೨೭ |
| ೨೧. ಓದಿರಿ, ಬರೆಯಿರಿ | .. | ೨೮ |
| ೨೨. ಒತ್ತಕ್ಷರಗಳ ಪರಿಚಯ | .. | ೨೯ |
| ೨೩. ಓದಿರಿ, ಬರೆಯಿರಿ | .. | ೩೧ |
| ೨೪. ಓದಿರಿ, ಬರೆಯಿರಿ | .. | ೩೨ |
| ೨೫. ಓದಿರಿ, ಬರೆಯಿರಿ | .. | ೩೩ |
| ೨೬. ದೀಪಾವಳಿ (ಕವಿತೆ) | – ಕರುಣಾಕರ ಶೆಟ್ಟಿ | ೩೪ |
| ೨೭. ಕೃಷ್ಣ – ಸುಧಾಮ | .. | ೩೫ |
| ೨೮. ಪರಿಸರ ಕಲಿಸುವ ಪಾಠ (ಕವಿತೆ) | – ಎಚ್. ಬಿ. ಕುರಟ್ಟಿ | ೩೭ |

# ೧. ಶಾಲೆಗೆ ಹೋಗೋಣ




ಬನ್ನಿರಿ ಬನ್ನಿರಿ ಗೆಳತಿಯರೆ
ಶಾಲೆಗೆ ನಾವು ಹೋಗೋಣ.

ಅ ಆ ಇ ಈ ಓದೋಣ
ಕ ಕಾ ಬಳ್ಳಿ ಬರೆಯೋಣ


ಪಾಠವ ಓದಲು ಕಲಿಯೋಣ
ತರತರ ಆಟ ಆಡೋಣ

ಒಳ್ಳೆಯ ಕಥೆಯನು ಕೇಳೋಣ
ಮರೆಯದೆ ಶಾಲೆಗೆ ಹೋಗೋಣ

ಗುರುಗಳ ಮಾತನು ಕೇಳೋಣ
ಜಯದ ಪ್ರಶಸ್ತಿ ಪಡೆಯೋಣ

ಶಿ.ಸೂ. : ಶ್ರವಣ ಕೌಶಲ ಬೆಳೆಸಲು ಈ ಶಿಶುಗೀತೆಯನ್ನು ಕೊಡಲಾಗಿದೆ. ರಾಗಬದ್ಧವಾಗಿ ಸಾಭಿನಯದೊಂದಿಗೆ ಹಾಡಿ ತೋರಿಸಿರಿ, ಮಕ್ಕಳಿಂದ ಹಾಡಿಸಿರಿ.

# ೨. ಏರಿಸೋಣ ಬಾವುಟ



ಬನ್ನಿ ಬನ್ನಿ ಚಿಣ್ಣರೆಲ್ಲ
ಏರಿಸೋಣ ಬಾವುಟ
ಬಾನಬಯಲ ಗಾಳಿಯಲ್ಲಿ
ಹಾರುತಿರಲಿ ಪಟಪಟ.

ಅಡಿಗೆ ಹಸಿರು ನಡುವೆ ಬಿಳಿದು
ಮೇಲೆ ಬಣ್ಣ ಕೇಸರಿ
ನಡುವೆ ಚಕ್ರ ನೀಲಿ ಬಣ್ಣ
ಧ್ವಜವು ಎನಿತು ಸುಂದರ

ನಮ್ಮ ನಾಡ ಹಿರಿಮೆ ಕಥೆಯ
ಸಾರುತಿಹುದು ಸಂತತ
ಇದಕೆ ಕೈ ಮುಗಿದು ಹೊಗಳಿ ಹಾಡಿ
ಜಯ ಜಯ ಜಯ ಭಾರತ

ಶಿ.ಸೂ. : ಈ ಕವಿತೆಯನ್ನು ರಾಗಬದ್ಧವಾಗಿ ಸಾಭಿನಯದೊಂದಿಗೆ ಹಾಡಲು ಮಕ್ಕಳಿಗೆ ಕಲಿಸಿರಿ.

# ೩. ಚತುರ ಕಾಗೆ



ಶಿ.ಸೂ. : ಚಿತ್ರಗಳ ಸಹಾಯದಿಂದ ಕಥೆಯನ್ನು ರಚಿಸಿ ಮಕ್ಕಳಿಗೆ ಹೇಳಿರಿ. ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳಿ ಮಾತನಾಡುವ ಕೌಶಲ ಬೆಳೆಸಿರಿ.

# ೪. ಕಾಯಿಪಲ್ಲೆ ಮಾರುಕಟ್ಟೆ



(ಗೋಪಾಲನು ತಾಯಿಯ ಜೊತೆಗೆ ಕಾಯಿಪಲ್ಲೆ ಮಾರುಕಟ್ಟೆಗೆ ಬಂದಿದ್ದಾಗ)

ಗೋಪಾಲ : ಅಮ್ಮಾ ನೀನು ಏನೇನು ಕೊಂಡುಕೊಳ್ಳುವೆ ?

ಅಮ್ಮ : ಬದನೆಕಾಯಿ, ಹೀರೇಕಾಯಿ, ಕುಂಬಳಕಾಯಿ, ಬಟಾಟಿ, ಈರುಳ್ಳಿ ಕೊಂಡುಕೊಳ್ಳುತ್ತೇನೆ.

ಗೋಪಾಲ : ಅಮ್ಮಾ, ಅದಾವ ಕಾಯಿಪಲ್ಲೆ, ಹಗ್ಗದಂತೆ ಉದ್ದವಾಗಿದೆಯಲ್ಲ !

ಅಮ್ಮ : ಅದು ಪಡವಲಕಾಯಿ. ಅದು ಬಳ್ಳಿಯಲ್ಲಿ ಬೆಳೆಯುತ್ತದೆ.

ಗೋಪಾಲ : ಹಾಗಾದರೆ ಬದನೆ ?

ಅಮ್ಮ : ಅದು ಗಿಡದಲ್ಲಿ ಬೆಳೆಯುತ್ತದೆ.

ಗೋಪಾಲ : ಅಮ್ಮಾ, ಇದೇನು ಕೆಂಪು ಬಣ್ಣದ್ದು ?

ಅಮ್ಮ : ಅದು ಗಜ್ಜರಿ. ಇದೋ ನೋಡು ಇದು ಮೂಲಂಗಿ. ಇವು ನೆಲದಲ್ಲಿ ಬೆಳೆಯುತ್ತವೆ.


ಗೋಪಾಲ : ಅಮ್ಮಾ, ನನಗೆ ಬಾಳೆಹಣ್ಣು ಬೇಕು.

ಅಮ್ಮ : ಆಗಲಿ ಕೊಂಡುಕೊಳ್ಳೋಣ.

ಶಿ.ಸೂ. : ಈ ಸಂಭಾಷಣೆಯನ್ನು ಮಕ್ಕಳಿಗೆ ಓದಿ ತೋರಿಸಿರಿ. ಇಂಥ ಸನ್ನಿವೇಶವನ್ನು ಶಾಲೆಯಲ್ಲಿ ನಿರ್ಮಾಣ ಮಾಡಿರಿ.

# ೫. ಅಕ್ಷರಗಳ ಅವಯವಗಳು

ನೋಡಿರಿ, ಬರೆಯಿರಿ



ಶಿ.ಸೂ. : ಬಾಣದ ಗುರುತಿನ ಪ್ರಕಾರ ಅವಯವಗಳನ್ನು ಬರೆಯಲು ಹೇಳಿರಿ. ಡಾಟಿನಲ್ಲಿ ಬರೆದು ನಂತರ ಸ್ವತಂತ್ರವಾಗಿ ಗೆರೆಯ ಮೇಲೆ ಬರೆಯಲು ಹೇಳಿರಿ.

# ೬. ಕನ್ನಡ ವರ್ಣಮಾಲೆ

ಅ ಆ ಇ ಈ ಉ ಊ ಋ ೠ

ಎ ಏ ಐ ಒ ಓ ಔ ಅಂ ಅಃ

ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ


ತ ಥ ದ ಧ ನ

ಪ ಫ ಬ ಭ ಮ

ಯ ರ ಲ ವ ಶ

ಷ ಸ ಹ ಳ

# ೨. ಅಜಯ



ಅಜಯ


ಇವ ಅಜಯ

| | | | | |
|---|---|---|---|---|
| ಅ | ಇ | ಜ | ಯ | ವ |

ಅವ ಇವ

ಜಯ ಅಜಯ

# ೮. ಈಶ



ಈಶ

ಈತ ಈಶ

ಆತ ಬಸವ


ಬಸವ ಈಶನ ಮಗ

| | | | | | |
|---|---|---|---|---|---|
| ಆ | ಈ | ಗ | ತ | ಸ | ಬ |

ಓದಿರಿ, ಬರೆಯಿರಿ

ಮಗ ಬನ ಈಶ ವನ

# ೯. ದಳ





| | | | | | |
|---|---|---|---|---|---|
| ಐ | ಕ | ದ | ಲ | ಹ | ಳ |

## ಓದಿರಿ, ಬರೆಯಿರಿ

| | | |
|---|---|---|
| ದನ | ಹಯ | ನಳ |
| ಕದ | ಗಳ | ದಳ |
| ಐದಳ | ಕನಕ | ಕಮಲ |

# ೧೦. ಔಷಧ




ಔಷಧ

ಈ ಔಷಧ ಋಷಭನ ಔಷಧ

ಈ ಚಮಚ ಔಷಧದ ಚಮಚ


ಋಷಭನ ಔಷಧದ ಚಮಚ

| | | | | |
|---|---|---|---|---|
| ಋ | ಔ | ಚ | ಧ | ಷ |

ಧನ　　ಚರಕ　　ಔಷಧ

ಚಮಚ　　ಋಷಭ　　ಮದನ

# ೧೧. ಊಟ




| | | | | | | |
|---|---|---|---|---|---|---|
| ಊ | ಜ | ಟ | ಥ | ಯ | ಶ | ಸ |

## ಓದಿರಿ, ಬರೆಯಿರಿ

| | | |
|---|---|---|
| ಜಯ | ಯಶ | ಸರ |
| ಜನ | ರಥ | ಚಟ |
| ಶಯನ | ನಗರ | ಸರಸ |

# ೧೨. ಓದಿರಿ, ಬರೆಯಿರಿ

| | |
|---|---|
| ಜನ | ವರ |
| ನರ | ತಟ |
| ಈಗ | ಊಟ |
| ಜಗ | ಆತ |
| ಜಯ | ಜಲ |
| ನಭ | ಬನ |
| ದಡ | ಸರ |
| ಬಲ | ಜಯ |
| ಈರ | ಈಶ |
| ಅವ | ಇವ |

# ೧೩. ಓದಿರಿ, ಬರೆಯಿರಿ

| | |
|---|---|
| ಸದನ | ಅಂಬರ |
| ಗಮನ | ಮಗಧ |
| ನಯನ | ಚರಕ |
| ಬಡವ | ಔಡಲ |
| ಜಲಜ | ಐದಳ |
| ಪದಕ | ಕಳಸ |
| ಬಳಪ | ರಭಸ |
| ಸಮಯ | ಅಜಯ |
| ತಬಕ | ಜನಕ |
| ವನಜ | ನಮನ |

# ೧೪. ಓದಿರಿ, ಬರೆಯಿರಿ

| | |
|---|---|
| ಕಲರವ | ಕಸವರ |
| ಅಕಬರ | ಸಡಗರ |
| ಗರಗಸ | ಮದಗಜ |
| ಸಳಸಳ | ಸರಸರ |
| ಸದಮಳ | ಜಲಚರ |
| ಖಣಖಣ | ರಸಮಯ |
| ತಳಮಳ | ಕಳವಳ |
| ತರತರ | ಜನಮನ |
| ಅವಸರ | ನವರಸ |

# ೧೫. ಗುಣಿತಾಕ್ಷರಗಳ ಪರಿಚಯ

| ಸ್ವರ ಸಂಕೇತಗಳು | ್ | ಾ | ಿ | ೀ | ು | ೂ | ೆ | ೇ | ೈ | ೊ | ೋ | ೌ | ಂ | ಃ |
|---|---|---|---|---|---|---|---|---|---|---|---|---|---|---|
| ಗುಣಿತಾ ಕ್ಷರಗಳು | ಕ | ಕಾ | ಕಿ | ಕೀ | ಕು | ಕೂ | ಕೆ | ಕೇ | ಕೈ | ಕೊ | ಕೋ | ಕೌ | ಕಂ | ಕಃ |

ಗುಣಿತಾಕ್ಷರಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಮತ್ತು ಬರೆಯಲು ಕಲಿಸಿರಿ.

| ಕ | ಕ | ಕಾ | ಕಿ | ಕೀ | ಕು | ಕೂ | ಕೆ | ಕೇ | ಕೈ | ಕೊ | ಕೋ | ಕೌ | ಕಂ | ಕಃ |
|---|---|---|---|---|---|---|---|---|---|---|---|---|---|---|
| ಖ | | | | | | | | | | | | | | |
| ಗ | | | | | | | | | | | | | | |
| ಘ | | | | | | | | | | | | | | |
| ಙ | | | | | | | | | | | | | | |
| ಚ | | | | | | | | | | | | | | |
| ಛ | | | | | | | | | | | | | | |
| ಜ | | | | | | | | | | | | | | |
| ಝ | | | | | | | | | | | | | | |
| ಞ | | | | | | | | | | | | | | |
| ಟ | | | | | | | | | | | | | | |
| ಠ | | | | | | | | | | | | | | |
| ಡ | | | | | | | | | | | | | | |
| ಢ | | | | | | | | | | | | | | |
| ಣ | | | | | | | | | | | | | | |

# ಗುಣಿತಾಕ್ಷರಗಳ ಪರಿಚಯ

| ತ | ತ | ತಾ | ತಿ | ತೀ | ತು | ತೂ | ತೆ | ತೇ | ತೈ | ತೊ | ತೋ | ತೌ | ತಂ | ತಃ |
|---|---|---|---|---|---|---|---|---|---|---|---|---|---|---|
| ಥ | | | | | | | | | | | | | | |
| ದ | | | | | | | | | | | | | | |
| ಧ | | | | | | | | | | | | | | |
| ನ | | | | | | | | | | | | | | |
| ಪ | | | | | | | | | | | | | | |
| ಫ | | | | | | | | | | | | | | |
| ಬ | | | | | | | | | | | | | | |
| ಭ | | | | | | | | | | | | | | |
| ಮ | | | | | | | | | | | | | | |
| ಯ | | | | | | | | | | | | | | |
| ರ | | | | | | | | | | | | | | |
| ಲ | | | | | | | | | | | | | | |
| ವ | | | | | | | | | | | | | | |
| ಶ | | | | | | | | | | | | | | |
| ಷ | | | | | | | | | | | | | | |
| ಸ | | | | | | | | | | | | | | |
| ಹ | | | | | | | | | | | | | | |
| ಳ | | | | | | | | | | | | | | |

# ೧೬. ಮನೆ



ಈ ಮನೆ ಶಾರದೆಯ ಮನೆ.

ಶಾರದೆಯ ಮನೆ ಬಹಳ ಅಂದವಾಗಿದೆ. ಅದರಲ್ಲಿ ಅಡುಗೆಯ ಮನೆ, ಪಡಸಾಲೆ, ದೇವರಕೋಣೆ, ಓದುವ ಕೋಣೆ, ಮಲಗುವ ಕೋಣೆ ಮುಂತಾದವು ಇವೆ.

ಮನೆಯ ಮುಂದೆ ಮಾವಿನ ಮರ ಇದೆ. ಮಾವಿನ ಮರದ ನೆರಳು ತಂಪು. ಗುಲಾಬಿ, ಸೇವಂತಿಗೆ, ದಾಸವಾಳ ಮುಂತಾದ ಹೂವಿನ ಗಿಡಗಳೂ ಇವೆ.

ಒಂದು ಹಸು ಇದೆ. ಹಸುವಿನ ಹೆಸರು ಗೌರಿ. ಶಾರದೆಯ ತಂದೆ ಹಸುವಿನ ಆರೈಕೆ ಮಾಡುವನು. ತಾಯಿ ಹಾಲು ಕರೆಯುವಳು. ಅವಳು ಶಾರದೆಗೆ ಕುಡಿಯಲು ನೊರೆ ಹಾಲು ಕೊಡುವಳು. ಶಾರದೆ ಹಾಲು ಕುಡಿದು ಶಾಲೆಗೆ ಹೋಗುವಳು. ಗೆಳತಿಯರ ಜೊತೆಗೆ ಪಾಠ ಓದುವಳು ಆಟ ಆಡುವಳು. ಶಾರದೆ ಜಾಣ ಬಾಲಕಿ.

– *ಶಿವಶಂಕರ ಹೊನ್ನುಂಗರ*

## ಅಭ್ಯಾಸ

೧) **ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಈ ಮನೆ ಯಾರ ಮನೆ ?

________________________________________

________________________________________

ಆ) ಮನೆಯಲ್ಲಿ ಯಾವ ಯಾವ ಕೋಣೆಗಳಿವೆ ?

________________________________________

________________________________________

ಇ) ಮನೆಯ ಮುಂದೆ ಯಾವ ಯಾವ ಹೂವಿನ ಗಿಡಗಳಿವೆ ?

________________________________________

________________________________________

ಈ) ತಂದೆ ಏನು ಮಾಡುವನು ?

________________________________________

________________________________________

ಉ) ಗೆಳತಿಯರ ಜೊತೆಗೆ ಶಾರದೆ ಏನು ಮಾಡುವಳು ?

________________________________________

________________________________________

೨) **ಬಿಟ್ಟ ಸ್ಥಳ ತುಂಬಿರಿ.**

೧) ಶಾರದೆಯ ಮನೆ ಬಹಳ ..................


೨) .................. ನೆರಳು ತಂಪು.

೩) ತಾಯಿ .................. ಕರೆಯುವಳು.

೪) .................. ಜಾಣ ಬಾಲಕಿ.

## ಉಪಕ್ರಮ

ಕೆಳಗಿನ ಚುಕ್ಕೆಗಳನ್ನು ಜೋಡಿಸಿ ಚಿತ್ರ ರಚಿಸಿರಿ.




# ೧೭. ಕಸಬುಗಾರರು



ಈತ ಶರಣ

ಶರಣ ಶಿಂಧೆವಾಡಿ ಊರಿನ ಕುಂಬಾರ.
ಇವನು ಅರಲಿನಿಂದ ಗಡಿಗೆ-ಮಡಿಕೆ ತಯಾರಿಸುವನು.
ಶರಣನು ತಿಗರಿಯಿಂದ ಗಡಿಗೆ ಮಡಿಕೆ ಬಹಳ ಸುಂದರ.
ಅವನು ಸಾತಾರಾದ ಪೇಟೆಗೆ ಹೋಗಿ ಗಡಿಗೆ- ಮಡಿಕೆ ಮಾರುವನು.



ಈತ ಭರಮ

ಭರಮ ಹೊಸೂರಿನ ಬಡಿಗ.
ಭರಮ ಕೊರಡಿನಿಂದ ಸಾಮಾನು ತಯಾರಿಸುವನು.
ಕಿರಿಯರಿಗಾಗಿ ಆಟಿಗೆ ತಯಾರಿಸುವನು.
ಆಟಿಗೆಗಳು ನೋಡಲು ಬಹಳ ಅಂದ.



ನಾರಾಯಣ

ಈತ ನಾರಾಯಣ
ನಾರಾಯಣನು ನೇಕಾರ
ನಾರಾಯಣನು ನೂಲಿನಿಂದ ಬೇರೆ ಬೇರೆ
ಅರಿವೆಗಳನು ನೇಯುವನು.



ಗೋಪಾಲ

ಈತ ಗೋಪಾಲ

ಗೋಪಾಲ ಗೌಳಿಗ. ಇವನು ಹಸುವಿನ ಹಾಲು ಕರೆಯುವನು.
ಹಲಸೂರಿನ ಪೇಟೆಗೆ ಹೋಗಿ ಹಾಲು ಮಾರುವನು.
ಮನೆಗೆ ಬೇಕಾಗುವ ಸಾಮಾನು ತರುವನು.
ಮನೆಯವರೊಡನೆ ಸುಖವಾಗಿ ಬಾಳುವನು.

## ಅಭ್ಯಾಸ

**೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಕುಂಬಾರನು ಏನು ತಯಾರಿಸುವನು ?

______________________________

______________________________

ಆ) ಆಟಿಗೆ ಸಾಮಾನುಗಳನ್ನು ಯಾರು ತಯಾರಿಸುವರು ?

______________________________

______________________________

ಇ) ಅರಿವೆಗಳನ್ನು ಯಾರು ನೇಯುವರು ?

______________________________

______________________________

ಈ) ಗೌಳಿಗನು ಹಾಲನ್ನು ಎಲ್ಲಿ ಮಾರುವನು ?

______________________________

______________________________

ಉ) ಕಸಬುಗಾರರ ಹೆಸರು ಬರೆಯಿರಿ.

______________________________

______________________________

**೨) ಹೊಂದಿಸಿ ಬರೆಯಿರಿ.**

| | | |
|---|---|---|
| ೧) ಭರಮ | – | ಬಟ್ಟೆ |
| ೨) ಗೌಳಿಗ | – | ಶರಣ |
| ೩) ಕುಂಬಾರ | – | ಹಾಲು |
| ೪) ನೇಕಾರ | – | ಬಡಿಗ |

**೩) ಹಸ್ತಲಿಖಿತ ಭಾಗವನ್ನು ಓದಿರಿ.**

ಈ ಆಕಳು ರಾಮುನ ಆಕಳು. ರಾಮುನ ಆಕಳ ಮೈ ಬಿಳಿದು. ರಾಮುನು ಆಕಳ ಮೈ ತೊಳೆಯುವನು. ಆಕಳಿಗೆ ಮೇವು ತಿನಿಸುವನು. ನೀರು ಕುಡಿಸುವನು.

ಆಕಳು ಹಾಲು ಕೊಡುವುದು. ರಾಮುನ ಮಗ ಬಸವ ಹಾಗೂ ಮಗಳು ರೇವತಿ. ಅವರು ಆಕಳ ಹಾಲು ಕುಡಿಯುವರು. ಆಕಳ ಸೆಗಣಿ, ಗೋಬರ ಅನಿಲ, ವಿಭೂತಿ ತಯಾರಿಸಲು ಹಾಗೂ ಮನೆ ಸಾರಿಸಲು - ಹೀಗೆ ನಮಗೆ ಬಹು ಉಪಯೋಗಿ ಯಾಗಿರುವುದು.

**ಉಪಕ್ರಮ**

ಹಳ್ಳಿಯ ಕಸಬುಗಾರರ ಮನೆಗೆ ಭೆಟ್ಟಿ ನೀಡಿ ಅವರ ಜೀವನ ಮತ್ತು ಕೆಲಸಗಳ ಬಗ್ಗೆ ತಿಳಿದುಕೊಳ್ಳಿರಿ.

# ೧೮. ನಮ್ಮ ಶಾಲೆ

ನೋಡ ಬನ್ನಿ ನಮ್ಮ ಶಾಲೆ
ಹಸಿರು ಸಿರಿಯ ನಡುವಿದೆ
ಶುದ್ಧ ನೀರು, ಸ್ವಚ್ಛಗಾಳಿ
ಸ್ವಚ್ಛ ಪರಿಸರವಿಲ್ಲಿದೆ.


ಸುತ್ತ - ಮುತ್ತ ಸದಾ ಹಸಿರು
ಮಕ್ಕಳೇ ಇದರ ಉಸಿರು
ಭವ್ಯವಾದ ದೇಗುಲ
ತಲೆಯೆತ್ತಿ ನಿಂತಿದೆ.

ದಿನವೂ ನಡೆವ ಆಟ-ಪಾಠ
ಮಧ್ಯಾಹ್ನದ ಬಿಸಿಯೂಟ
ಗಿಡಗಳೊಡನೆ ಒಡನಾಟ
ಮನಕೆ ಮುದವ ನೀಡಿದೆ.

ಜಾತಿ-ಧರ್ಮಗಳ ಹಂಗಿಲ್ಲ
ಮೇಲು-ಕೀಳು ಭೇದವಿಲ್ಲ
ಅಕ್ಕ-ತಂಗಿ, ಅಣ್ಣ-ತಮ್ಮ
ಒಂದೇ ಇಲ್ಲಿ ನಾವೆಲ್ಲ.

ಓದು-ಬರಹ ಕಲಿಯುತ
ನಾಡಿಗಾಗಿ ದುಡಿಯುತ
ಸ್ವಾರ್ಥ ತೊರೆದು ಬಾಳುವೆವು
ಭಾರತಾಂಬೆಗೆ ನಮಿಸುತ !

- ಗೀತಾ ಬರ್ಲ



## ಅಭ್ಯಾಸ

೧) **ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

೧) ಸ್ವಚ್ಛ ಪರಿಸರದಲ್ಲಿ ಏನೇನು ಇವೆ ?

______________________________

______________________________

೨) ಪರಿಸರದಲ್ಲಿ ಏನು ತಲೆಯೆತ್ತಿ ನಿಂತಿದೆ ?

______________________________

______________________________

೩) ಶಾಲೆಯಲ್ಲಿ ಆಟ - ಪಾಠಗಳ ಜೊತೆಗೆ ಮತ್ತೆ ಏನು ಸಿಗುತ್ತದೆ ?

______________________________

______________________________

೪) ಯಾವುದರ ಹಂಗು ಇಲ್ಲ ?

______________________________

______________________________

೫) ಏನನ್ನು ತೊರೆದು ಬಾಳುವರು ?

______________________________

______________________________

೨) **ಬಿಟ್ಟ ಸ್ಥಳ ತುಂಬಿರಿ.**

೧) ............... ಸಿರಿಯ ನಡುವಿದೆ.
೨) ವಿದ್ಯಾರ್ಥಿಗಳೆ ಇದರ ...............
೩) ಮನಕೆ ............... ನೀಡಿದೆ
೪) ............... ಬರಹ ಕಲಿಯುತ

೩) **ಈ ಕವಿತೆಯನ್ನು ಸಾಭಿನಯದೊಂದಿಗೆ ಹಾಡಿರಿ.**

**ಉಪಕ್ರಮ**

★ ದೇಶಭಕ್ತಿಗೀತೆಗಳನ್ನು ಸಂಗ್ರಹಿಸಿರಿ, ಹಾಡಲು ಕಲಿಯಿರಿ.

★ ಕೆಳಗಿನ ಚಿತ್ರಗಳನ್ನು ಕ್ರಮಬದ್ಧವಾಗಿ ಜೋಡಿಸಿರಿ.











# ೧೯. ಓದಿರಿ, ಬರೆಯಿರಿ

| | | | |
|---|---|---|---|
| ಕಾಗೆ | ______ | ತಾಯಿ | ______ |
| ಗಿಡ | ______ | ತೀರ | ______ |
| ತುಳಿ | ______ | ಗೂಡು | ______ |
| ಬೆಳೆ | ______ | ವೀರ | ______ |
| ಪೈರು | ______ | ಜೇನು | ______ |
| ಕೊಡು | ______ | ತೊರೆ | ______ |
| ಜೋಡಿ | ______ | ಸೋಗು | ______ |
| ಸೌದೆ | ______ | ಗೌಡ | ______ |
| ಭಂಟ | ______ | ತೊಡು | ______ |
| ಗುಂಡ | ______ | ಬೀಳು | ______ |
| ಮಳೆ | ______ | ತೇರು | ______ |

## ೨೦. ಓದಿರಿ, ಬರೆಯಿರಿ

| | |
|---|---|
| ಗೌರವ | ಚೌಡಿಕೆ |
| ಜೀರಿಗೆ | ನಾರದ |
| ಜೋಪಾನ | ಕೋಗಿಲೆ |
| ಚಿರತೆ | ಜೈಕಾರ |
| ವೈಭವ | ಅಮರ |
| ಕಿಡಕಿ | ಸಂಬಳ |
| ಕುಂಟಾಟ | ಕಂಬಳಿ |
| ಬಂಗಾರ | ಶೋಧನ |
| ಸೇವಕ | ಸಂವಾದ |
| ಮುಕುಂದ | ಭುವನ |
| ನೆಗಡಿ | ಕೇದಗೆ |
| ನಗಾರಿ | ಹುಡುಗ |

## ೨೧. ಓದಿರಿ, ಬರೆಯಿರಿ

| | | | |
|---|---|---|---|
| ಕೊರವಂಜಿ | ______ | ಚಾಮರಸ | ______ |
| ಕುಣಿದಾಡು | ______ | ಸಮರಸ | ______ |
| ಶೌಚಾಲಯ | ______ | ಏಕದಂತ | ______ |
| ಹೀರೆಕಾಯಿ | ______ | ನವಜಾತ | ______ |
| ಪೈಗಂಬರ | ______ | ಸಿರಿತನ | ______ |
| ಮೋಜುಗಾರ | ______ | ಪರಿಮಳ | ______ |
| ಜಯಕಾರ | ______ | ಸಾರವಾಡ | ______ |
| ಬಾಗೇವಾಡಿ | ______ | ಗಂಗಾಧರ | ______ |
| ಸೌತೆಕಾಯಿ | ______ | ಆಡಂಬರ | ______ |
| ಜಿಗಿದಾಡು | ______ | ಪರದಾಡು | ______ |

# ೨೨. ಒತ್ತಕ್ಷರಗಳ ಪರಿಚಯ

| | | | | |
|---|---|---|---|---|
| ಕ್ಕ | ಖ್ಖ | ಗ್ಗ | ಘ್ಘ | ಙ್ಙ |
| ಚ್ಚ | ಛ್ಛ | ಜ್ಜ | ಝ್ಝ | ಞ್ಞ |
| ಟ್ಟ | ಠ್ಠ | ಡ್ಡ | ಢ್ಢ | ಣ್ಣ |
| ತ್ತ | ಥ್ಥ | ದ್ದ | ಧ್ಧ | ನ್ನ |
| ಪ್ಪ | ಫ್ಫ | ಬ್ಬ | ಭ್ಭ | ಮ್ಮ |

| | | | | |
|---|---|---|---|---|
| ಯ್ಯ | ರ್ರ | ಲ್ಲ | ವ್ವ | ಶ್ಶ |
| ಷ್ಷ | ಸ್ಸ | ಹ್ಹ | ಳ್ಳ | |

## ಮೂಲ ಅಕ್ಷರಗಳೇ ಒತ್ತಕ್ಷರಗಳಾಗಿರುವವು

ಖ್ಖ ಙ್ಙ ಜ್ಜ ಞ್ಞ ಟ್ಟ ಬ್ಬ

## ತಲೆಕಟ್ಟು ಕಳೆದುಕೊಂಡು ಒತ್ತಕ್ಷರಗಳಾಗುವ ಅಕ್ಷರಗಳು

ಕ್ಕ ಗ್ಗ ಘ್ಘ ಚ್ಚ ಛ್ಛ ಝ್ಝ

ಠ್ಠ ಡ್ಡ ಢ್ಢ ಥ್ಥ ದ್ದ ಧ್ಧ

ಪ್ಪ ಫ್ಫ ಶ್ಶ ಷ್ಷ ಸ್ಸ ಹ್ಹ

ಳ್ಳ

## ಭಿನ್ನರೂಪದ ಒತ್ತಕ್ಷರಗಳು

ತ್ತ ನ್ನ ಮ್ಮ ಯ್ಯ ರ್ರ ಲ್ಲ

# ೨೩. ಓದಿರಿ, ಬರೆಯಿರಿ

| | | | |
|---|---|---|---|
| ಗಿಡ್ಡ | | ದಪ್ಪ | |
| ಹಣ್ಣು | | ಬೆತ್ತ | |
| ಕತ್ತೆ | | ಅವ್ವ | |
| ಗಿಣ್ಣು | | ತುಪ್ಪ | |
| ರೊಟ್ಟಿ | | ಹದ್ದು | |
| ಬೆಲ್ಲ | | ಅಜ್ಜಿ | |
| ಅಕ್ಕ | | ಬಳ್ಳಿ | |
| ಬಟ್ಟೆ | | ಹೆಪ್ಪು | |
| ಹಬ್ಬ | | ಕೆಟ್ಟ | |
| ಉದ್ದ | | ಪೆನ್ನು | |
| ಗುಬ್ಬಿ | | ಹಲ್ಲಿ | |


# ೨೪. ಓದಿರಿ, ಬರೆಯಿರಿ

| | |
|---|---|
| ಆಪ್ತ | ಮಿತ್ರ |
| ವಜ್ರ | ವಾಸ್ತು |
| ಸ್ಥಿರ | ಪಾತ್ರೆ |
| ಪದ್ಮ | ವಿಶ್ವ |
| ಬ್ರಹ್ಮ | ಜಾತ್ರೆ |
| ದಕ್ಷ | ಯಜ್ಞ |
| ಕ್ಷೇತ್ರ | ಧರ್ಮ |
| ಛತ್ರಿ | ಗಸ್ತು |
| ಬೆಸ್ತ | ಭದ್ರ |
| ಮರ್ಮ | ರಕ್ತ |
| ಅಲ್ಪ | ಭಸ್ಮ |

# ೨೫. ಓದಿರಿ, ಬರೆಯಿರಿ

| | |
|---|---|
| ವಿಶ್ವಾಸ | ಗಾಂಭೀರ್ಯ |
| ಆಶ್ಚರ್ಯ | ಆರ್ಭಟ |
| ತಕ್ಷಣ | ವೈಷ್ಣವಿ |
| ನಿಸ್ವಾರ್ಥ | ಗಂಧರ್ವ |
| ಸೇರ್ಪಡೆ | ಪರ್ವತ |
| ದರ್ಪಣ | ವಿಕ್ರಾಂತ |
| ಸುಭಿಕ್ಷ | ನಿತ್ರಾಣ |
| ಐಶ್ವರ್ಯ | ಅರ್ಚನೆ |
| ಕೃಪಾಣ | ಸಂಪ್ರೀತಿ |
| ಕಸ್ತೂರಿ | ಗಮನ |

# ೨೬. ದೀಪಾವಳಿ



ದೀಪಾವಳಿ ಹಬ್ಬವು ಬಂದಿತು
ಸುಖ ನೆಮ್ಮದಿಯನು ತಂದಿತು
ಸಾಲು ಸಾಲು ದೀಪಗಳು
ಬಣ್ಣ ಬಣ್ಣದ ಕಂದೀಲುಗಳು

ಹೊಸ ಬಟ್ಟೆಗಳ ತೊಡೋಣ
ನಕ್ಷತ್ರ ಕಡ್ಡಿಗಳ ಸುಡೋಣ
ದೀಪಾವಳಿ ಶುಭ ಕೋರುವ ಹಬ್ಬ
ಎಲ್ಲರು ನಕ್ಕು ನಲಿಯುವ ಹಬ್ಬ

ಗೋವಿನ ಪೂಜೆಯ ಮಾಡೋಣ
ಹಿರಿಯರ ಪಾದಕೆ ನಮಿಸೋಣ
ದೀಪಾವಳಿ ಹಬ್ಬವು ಬಂದಿತು
ಸುಖ ನೆಮ್ಮದಿಯನು ತಂದಿತು.

– ಕರುಣಾಕರ ಶೆಟ್ಟಿ

## ಅಭ್ಯಾಸ

೧) **ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

೧) ದೀಪಾವಳಿ ಹಬ್ಬವು ಏನನ್ನು ತಂದಿತು ?
೨) ಸಾಲುಸಾಲಾಗಿ ಏನನ್ನು ಇಡುತ್ತಾರೆ ?
೩) ಯಾವ ಕಡ್ಡಿಗಳನ್ನು ಸುಡುತ್ತಾರೆ ?
೪) ಯಾವುದರ ಪೂಜೆ ಮಾಡುತ್ತಾರೆ ?
೫) ಯಾರಿಗೆ ನಮಸ್ಕರಿಸುತ್ತಾರೆ ?

೨) **ಕವಿತೆಯ ಬಿಟ್ಟ ಸಾಲುಗಳನ್ನು ತುಂಬಿರಿ.**

ಹೊಸ ಬಟ್ಟೆಗಳ ____________
________________________
________________________
____________ ನಲಿಯುವ ಹಬ್ಬ

೩) **ಈ ಕವಿತೆಯನ್ನು ಸಾಭಿನಯದೊಂದಿಗೆ ಹಾಡಿರಿ.**

## ಉಪಕ್ರಮ


ಕಾಗದದಿಂದ ಆಕಾಶ ಕಂದೀಲು ತಯಾರಿಸಿರಿ.

# ೨೭. ಕೃಷ್ಣ - ಸುದಾಮ

ಆವಂತಿಯಲ್ಲಿ ಸಾಂದೀಪನಿ ಗುರುಗಳ ಗುರುಕುಲವಿತ್ತು. ಅವರ ಗುರುಕುಲದಲ್ಲಿ ಕೃಷ್ಣ ಮತ್ತು ಸುದಾಮ ಶಿಕ್ಷಣ ಪಡೆಯುತ್ತಿದ್ದರು. ಅವರು ಗುರುಕುಲದಲ್ಲಿ ತಮ್ಮ ಬಾಲ್ಯವನ್ನು ಕಳೆದರು. ವಿದ್ಯೆಲಿತರು.

ಕೃಷ್ಣನು ರಾಜನ ಮಗನಾಗಿದ್ದನು. ಸುದಾಮನು ಬಡವರ ಮಗನು. ಆದರೂ ಅವರಿಬ್ಬರಲ್ಲಿ ಗಾಢವಾದ ಸ್ನೇಹ ಬೆಳೆಯಿತು. ಇಬ್ಬರೂ ಕೂಡಿ ಆಡಿದರು. ಕೂಡಿ ಓದು ಬರಹ ಕಲಿತರು. ಗುರುಗಳು ಇವರಿಬ್ಬರ ಸ್ನೇಹವನ್ನು ಕಂಡು ಮೆಚ್ಚಿದರು. ಹಲವು ವರ್ಷಗಳು ಕಳೆದವು. ಅವರ ವಿದ್ಯಾಭ್ಯಾಸವು ಪೂರ್ಣವಾಯಿತು. ಇಬ್ಬರೂ ಗುರುಗಳಿಗೆ ನಮಸ್ಕರಿಸಿ ತಮ್ಮ ತಮ್ಮ ಊರಿಗೆ ಹೋದರು.

ಕೃಷ್ಣನು ಮುಂದೆ ದ್ವಾರಕೆಯ ರಾಜನಾದನು. ಅವನ ಹೆಂಡತಿ ರುಕ್ಮಿಣಿ ರಾಣಿಯಾದಳು. ಆಗಾಗ ಕೃಷ್ಣನು ಸುದಾಮನನ್ನು ನೆನಪಿಸಿಕೊಳ್ಳುತ್ತಿದ್ದನು. ರಾಣಿ ರುಕ್ಮಿಣಿಗೆ ತಮ್ಮ ಬಾಲ್ಯದ ಒಡನಾಟವನ್ನು ಹೇಳುತ್ತಿದ್ದನು.



ಸುದಾಮನು ತನ್ನ ಹಳ್ಳಿಯಲ್ಲಿ ಕೆಲವು ಹುಡುಗರಿಗೆ ಪಾಠಹೇಳತೊಡಗಿದನು. ಅವನ ಗಳಿಕೆ ಚಿಕ್ಕದು. ಅಷ್ಟರಲ್ಲಿಯೇ ಅವನು ಜೀವನ ನಡೆಸುತ್ತಿದ್ದನು. ಮುಂದೆ ಸುದಾಮನ ಮದುವೆ ಆಯಿತು. ಮಕ್ಕಳಾದವು. ಆಗಾಗ ಸುದಾಮನು ತನ್ನ ಹೆಂಡತಿಗೆ ಕೃಷ್ಣನ ಗುರುಕುಲ ಜೀವನದ ಆನಂದ ವಿನೋದಗಳನ್ನು ಹೇಳುತ್ತಿದ್ದನು. ''ಕೃಷ್ಣ ದ್ವಾರಕೆಯ ರಾಜ. ಅವನು ನನ್ನ ಆತ್ಮೀಯ ಸ್ನೇಹಿತ'' ಎಂದು ಅಭಿಮಾನದಿಂದ ಹೇಳುತ್ತಿದ್ದನು.

ಹಲವು ವರ್ಷಗಳು ಕಳೆದವು. ಸಂಸಾರ ಸಾಗಿಸಲು ಗಳಿಕೆ ಸಾಲುತ್ತಿರಲಿಲ್ಲ. ಬಡತನ ಆವರಿಸಿತು. ಒಮ್ಮೆ ಸುದಾಮನ ಹೆಂಡತಿ ''ನಿಮ್ಮ ಗೆಳೆಯ ದ್ವಾರಕೆಯ ರಾಜನಲ್ಲವೆ? ಅವನ ಬಳಿಗೆ ಹೋಗಿಬನ್ನಿರಿ. ನಮ್ಮ ಬಡತನ ಕಡಿಮೆಯಾದೀತು'' ಎಂದು ಗಂಡನಿಗೆ ಹೇಳಿದಳು.

ಸುದಾಮನು ಇಲ್ಲಿಯವರೆಗೆ ಎಂದೂ ಪರರ ನೆರವನ್ನು ಕೇಳಿರಲಿಲ್ಲ. ಆದರೂ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಅವನು ಹೆಂಡತಿಯ ಮಾತಿಗೆ ಸಮ್ಮತಿಸಿದನು. ನಂತರ ತನ್ನ ಆಪ್ತಮಿತ್ರನಾದ ಕೃಷ್ಣನನ್ನು ಭೆಟ್ಟಿಯಾಗಲು ಹೋದನು.

## ಅಭ್ಯಾಸ

೧) **ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

೧) ಕೃಷ್ಣ ಸುದಾಮರು ತಮ್ಮ ಬಾಲ್ಯವನ್ನು ಎಲ್ಲಿ ಕಳೆದರು ?

೨) ಕೃಷ್ಣ ಸುದಾಮರ ಸ್ನೇಹ ಯಾವ ರೀತಿ ಇತ್ತು ?

೩) ಕೃಷ್ಣ ರುಕ್ಮಿಣಿಗೆ ಏನು ಹೇಳುತ್ತಿದ್ದನು ?

೪) ಸುದಾಮನ ಹೆಂಡತಿ ತನ್ನ ಗಂಡನಿಗೆ ಏನು ಹೇಳಿದಳು ?

೨) **ಬಿಟ್ಟ ಸ್ಥಳ ತುಂಬಿರಿ.**

೧) ಅವಂತಿಯಲ್ಲಿ ............... ಗುರುಗಳ ಗುರುಕುಲವಿತ್ತು.

೨) ............... ಬಡವನ ಮಗನು.

೩) ಕೃಷ್ಣನ ಹೆಂಡತಿಯ ಹೆಸರು ...............

೪) ಸುದಾಮನ ............... ಚಿಕ್ಕದು.

೫) ಸುದಾಮನು ಇಲ್ಲಿಯವರೆಗೆ ಎಂದೂ ಪರರ ............... ಕೇಳಿರಲಿಲ್ಲ.

೩) **ಅನುಲೇಖನ ಮಾಡಿರಿ.**

ಬಹಳ ದಿನಗಳ ಮೇಲೆ ಸುದಾಮನು ಕೃಷ್ಣನನ್ನು ಭೆಟ್ಟಿಯಾಗಲು ಬಂದಿದ್ದನು. ಸುದಾಮನನ್ನು ಕಂಡು ಕೃಷ್ಣನಿಗೆ ಅತೀವ ಆನಂದವಾಯಿತು. ಕೃಷ್ಣ ಮತ್ತು ರುಕ್ಮಿಣಿ ಇಬ್ಬರು ಕೂಡಿ ತುಂಬಾ ಉಪಚಾರ ಮಾಡಿದರು. ಊಟಕ್ಕೆ ತರತರದ ತಿಂಡಿತಿನಿಸುಗಳನ್ನು ಬಡಿಸಿದರು. ಇವರಿಬ್ಬರ ಉಪಚಾರದಿಂದ ಸುದಾಮನಿಗೆ ಬಹಳ ಆನಂದವಾಯಿತು.

________________________________________

________________________________________


________________________________________

________________________________________

**ಉಪಕ್ರಮ**

ಮಹಾಭಾರತದಲ್ಲಿಯ ದುರ್ಯೋಧನ ಮತ್ತು ಕರ್ಣರ ಸ್ನೇಹ ಸಂಬಂಧದ ಬಗ್ಗೆ ಶಿಕ್ಷಕರಿಂದ/ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ.

# ೨೮. ಪರಿಸರ ಕಲಿಸುವ ಪಾಠ



ನಮ್ಮ ಸುತ್ತಲಿರುವ ಜಗವ
ಒಮ್ಮೆ ನಾವು ನೋಡುವಾ
ಜಗವು ನಮಗೆ ಕಲಿಸುತಿರುವ
ಒಳ್ಳೆ ಪಾಠ ಕಲಿಯುವಾ

ತಾನು ಉರಿದು ಸೂರ್ಯ ನಮಗೆ
ಬಿಸಿಲ ಬೆಳಕ ಕೊಡುವನು
ಇರುಳಿನಲ್ಲಿ ಚಂದ್ರ ಇಳೆಗೆ
ಬೆಳದಿಂಗಳ ಸುರಿವನು

ಜುಳು ಜುಳೆಂದು ಹರಿವನೀರ
ನೆಂದು ನದಿಯು ಕುಡಿಯದು
ಜಗದ ಜನರು ಬದುಕಲೆಂದು
ನದಿಯು ನೀರು ಕೊಡುವುದು

ಹಣ್ಣುಗಳನು ಹೊತ್ತ ಮರವು
ತಾನು ಮಾತ್ರ ತಿನ್ನದು
ಪರರ ಹಸಿವು ತಣಿಸಲೆಂದು
ಮರವು ಹಣ್ಣು ಕೊಡುವುದು

ಹಸುವು ತಾನು ಕರೆದ ಹಾಲು
ತಾನೆ ಕುಡಿಯಲಾರದು
ಭುವಿಯ ಮಕ್ಕಳೆಲ್ಲ ಹಾಲು
ಕುಡಿಯಲೆಂದು ಕರೆವುದು

ಸೂರ್ಯ ಚಂದ್ರ ನದಿಯು ಮರವು
ಹಸುಗಳನ್ನು ಕಾಣುತ
ಪರರಿಗಾಗಿ ಬದುಕುತಿರುವ
ಅವುಗಳಂತೆ ಬಾಳುತ

ದಿನವು ನಮ್ಮ ಬದುಕಿನಲ್ಲಿ
ಪರರಿಗೊಳಿತು ಬಯಸುವಾ
ಪರರ ಸಂತಸವನು ಕಂಡು
ನಿತ್ಯ ನಾವು ಸುಖಿಸುವಾ

– ಎಚ್. ಬಿ. ಕುರಟ್ಟಿ

## ಅಭ್ಯಾಸ

**೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

೧) ಬಿಸಿಲು ನಮಗೆ ಯಾರಿಂದ ಸಿಗುತ್ತದೆ ?

___

___

೨) ಚಂದ್ರನಿಂದ ಏನು ದೊರಕುತ್ತದೆ ?

___

___

೩) ಮರವು ಏನನ್ನು ಕೊಡುತ್ತದೆ ?

___

___

೪) ಹಸುವು ಹಾಲನ್ನು ಯಾರಿಗಾಗಿ ಕೊಡುತ್ತದೆ ?

___

___

೫) ನಾವು ದಿನವೂ ಏನನ್ನು ಬಯಸಬೇಕು ?

___

___

**೨) ಕವಿತೆಯ ಬಿಟ್ಟ ಸಾಲುಗಳನ್ನು ಪೂರ್ಣ ಮಾಡಿರಿ.**

ಹಣ್ಣುಗಳನು ___

___

___

___ ಹಣ್ಣು ಕೊಡುವುದು

**೩) ಈ ಕವಿತೆಯನ್ನು ಸಾಭಿನಯದೊಂದಿಗೆ ಹಾಡಿರಿ.**

**ಉಪಕ್ರಮ**

ಸಮಾಜಕ್ಕೆ ರೈತನ ಕೊಡುಗೆ ಏನಿದೆ ಎಂಬುದನ್ನು ಶಿಕ್ಷಕರಿಂದ/ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ.


ಪ್ರಾಥಮಿಕ ಶಾಲೆ

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಹಾಗೂ ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

कन्नड सुगमभारती इ.५ वी

₹ 25.00

